1592 (2103) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಂಥಾಲಯ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಭ್ರಷ್ಟಾಚಾರ ಮತ್ತು ಅವ್ಯವಹಾರದ ಪ್ರಕರಣಗಳು ಪತ್ತೆಯಾಗಿವೆ (ಪ್ರಕರಣವಾರು ಪೂರ್ಣ ವಿವರಗಳೇನು);

ಆ) ಸರ್ಕಾರಕ್ಕೆ ಇದರಿಂದ ಎಷ್ಟು ರೂ.ಗಳ ನಷ್ಟವಾಗಿದೆ;

ಇ) ಇದಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ನಷ್ಟವಾಗಿರುವ ಹಣವನ್ನು ಯಾವ ರೀತಿ ವಸೂಲು ಮಾಡಲಾಗುವುದು?

ಶ್ರೀ ಬಸವರಾಜ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 2001–02ರಿಂದ 2005–06ರ ಸಾಲಿನಲ್ಲಿ ಬೆಂಗಳೂರು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಹಾಗೂ ಕೇಂದ್ರ ಗ್ರಂಥಾಲಯಗಳಲ್ಲಿ ಪುಸ್ತಕ ಖರೀದಿ ಹಾಗೂ ಪೀಠೋಪಕರಣಗಳ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ ಬಗ್ಗೆ ಪೂರ್ಣ ಪ್ರಮಾಣದ ತನಿಖೆ ಕೈಗೊಂಡ ನಂತರ ನಷ್ಟದ ಮೊತ್ತ ತಿಳಿಯುತ್ತದೆ.

ಇ) ತನಿಖಾ ವರದಿಯನ್ನು ಆಧರಿಸಿ ಮೇಲ್ನೋಟಕ್ಕೆ ತಪ್ಪಿತಸ್ಥರೆಂದು ಕಂಡುಬಂದ ಕೆಲ ಅಧಿಕಾರಿ/ನೌಕರರನ್ನು ಬೆಂಗಳೂರು ನಗರದಿಂದ ಬೇರೆ ಕಡೆಗೆ ವರ್ಗಾಯಿಸಲಾಗಿದೆ ಹಾಗೂ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಮೇಲ್ಕಂಡ ಗ್ರಂಥಾಲಯಗಳ ಲೆಕ್ಕಪತ್ರಗಳ ಬಗ್ಗೆ ವಿಶೇಷ ಆಡಿಟ್ ಮಾಡಿಸಲಾಗುತ್ತಿದೆ.

ಈ) ಪೂರ್ಣ ಪ್ರಮಾಣದ ತನಿಖೆಯಲ್ಲಿ ಸರ್ಕಾರಕ್ಕೆ ನಷ್ಟವಾಗಿದೆಯೆಂದು ಕಂಡುಬಂದಲ್ಲಿ ಆಯಾ ಅಧಿಕಾರಿ/ನೌಕರರಿಂದ ನಿಯಮಾನುಸಾರ ವಸೂಲು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.